ನನಗೆ ಸಂಗೀತದ ಜೂನಿಯರ್, ಸೀನಿಯರ್ ಸ್ವಲ್ಪ ಹೇಳಿಕೊಡಿ' ಅಂತ ಕೇಳಿದೆ. ಅವರು ಸ್ವಲ್ಪ ಸ್ವಲ್ಪ ಹೇಳಿಕೊಟ್ಟರು. ಸಂಗೀತಕ್ಕೆ ಸ್ವಲ್ಪ ಜಾಗ ಸಿಕ್ಕಿದರೆ ಸಾಕು. ನಮ್ಮ ಅನುಭವಗಳನ್ನೇ ದ್ರವ್ಯವಾಗಿಟ್ಟುಕೊಂಡು ಅದನ್ನು ಹಾಡಿಕೊಂಡು ಹೋಗುವಂಥ ರೀತಿ ಇತ್ತು.

◆ **ತಳ ಸಮುದಾಯದವರು ಬಳಸುತ್ತಿದ್ದ ಕಲೆಗಳನ್ನು ಬಿಟ್ಟು ಮೇಲಿನ ಸಮುದಾಯದವರು ಬಳಸುತ್ತಿದ್ದ ಕಲೆಯನ್ನು ನಿಮ್ಮ ಕಲೆಯಾಗಿಸಿಕೊಳ್ಳಬೇಕು ಅಂತ ನಿಮಗೆ ಯಾಕೆ ಅನ್ನಿಸಿತು?**

ಚಿಕ್ಕವಯಸ್ಸಿನಿಂದ ಮೇಲ್ನೋರು ನಮ್ಮನ್ನು ಕಡೆಗಣ್ಣಿನಿಂದ ನೋಡುತ್ತಿದ್ದುದನ್ನು ನಾನು ನೋಡಿದ್ದೆ. ವಿಂಗಡಿಸಿ ಮಾತಾಡೋದನ್ನು ನೋಡಿದ್ದೆ. ನಮ್ಮಲ್ಲಿ ಎಂಥ ಪ್ರತಿಭೆ ಇದ್ದರೂ ಅಲ್ಲಲ್ಲೇ ಬೇರ್ಪಡಿಸೋದನ್ನು ನೋಡ್ತಾ ಇದ್ದೆ. 'ಬಾರಯ್ಯ, ನೀನು ನಮ್ಮ ಜೊತೆ ಸರಿಸಮಾನಾಗಿ ಕೂತುಕೊಳ್ಳಬೇಕು' ಅನ್ನೋದಾದ್ರೆ ಅವರದೇ ವಿದ್ಯೆಗಳನ್ನು ಕಲೀಬೇಕು ಅನ್ನಿಸಿತು. ಅಲ್ಲಿಗೆ ಹೋಗೋಣ, ಸಾಧಿಸೋಣ ಅನ್ನೋ ಮನಸ್ಸು ಬಂದುಬಿಡ್ತು. ನಮ್ಮಪ್ಪ ಡೋಲು ನುಡಿಸುತ್ತಿದ್ದ. ಅದುನ್ನೆಲ್ಲ ಬಿಟ್ಟು ಉತ್ತಮರ ಹಿಡಿತದಲ್ಲಿದ್ದ ಹರಿಕಥೆ ಕೀರ್ತನೆ ಕಡೆ ವಾಲಿದೆ.

◆ **ಎಪ್ಪತ್ತರ ದಶಕದ ಮಧ್ಯಭಾಗ ನಿಮ್ಮ ಹರಿಕಥಾ ಬದುಕಿನ ಉತ್ತುಂಗದ ಸ್ಥಿತಿ. ಅದೇ ಹೊತ್ತಿನಲ್ಲಿ ಪ್ರಗತಿಪರ ಚಳವಳಿಗಳು, ಹೋರಾಟಗಳು ತೀವ್ರವಾಗಿದ್ದವು. ಅವು ನಿಮ್ಮ ಸಂಪರ್ಕಕ್ಕೆ ಬರಲಿಲ್ಲವೇ?**



ಇಲ್ಲ. ಅವಕ್ಕೂ ನನಗೂ ಸಂಪರ್ಕ ಏರ್ಪಡಲೇ ಇಲ್ಲ. ಅದು ಯಾಕೋ ಈಗ್ಲೂ ನನಗೆ ಕಾಡುತ್ತೆ. ಹರಿಕಥೆಗೆ ಹೋಗಿಬಿಟ್ಟೆನಲ್ಲ. ಹರಿಕಥೆ ಏನು ಮಾಡಿಬಿಟ್ಟು, ಮಾನಸಿಕವಾಗಿ ನನಗೆ ಅಲ್ಲಿಗೆ ಹೋಗಿಬಿಟ್ಟರೆ ನನ್ನನ್ನು ಇತರ ಸಮುದಾಯದವರು ಕರೆಯುವುದಿಲ್ಲವೇನೋ ಎಂಬ ಕೀಳರಿಮೆ ಬಂದುಬಿಡ್ತು. ಈ ಚಳವಳಿಯ ನಾಯಕರುಗಳು 'ಅವನನ್ನು ಯಾಕೆ ಕರಿಬೇಕು?' ಅಂದುಬಿಟ್ಟರೆ ಎನ್ನುವ ಭಯ ಕಾಡಲು ಶುರುವಾಯಿತು. ಬಂದವರು ಯಾರೂ ನನ್ನನ್ನು ಕರೆಯಲಿಲ್ಲ. ಹೋರಾಟಗಾರರು ಜೊತೆಗಿದ್ದರೂ ನನ್ನನ್ನು ಕರೆಯುತ್ತಿರಲಿಲ್ಲ. ಕೆ.ಬಿ. ಸಿದ್ಧಯ್ಯ ಅವರು ಮಾತ್ರ ಯಾವಾಗಲೂ ಆಫೀಸ್‌ಗೆ ಬರುತ್ತಿದ್ದರು. ಮಾತಾಡ್ತಿದ್ರು. ತುಂಬಾ ಗೌರವ ಕೊಡುತ್ತಿದ್ದರು. ಅವರು ಕೂಡ ಒಂದಿನಾನು ಹೋರಾಟಗಳ ಸಭೆಗೆ ಕರೆಯುತ್ತಿರಲಿಲ್ಲ. ಬಹುಶಃ ಅವನು ಅಲ್ಲೇ ಬೆಳೀಲಿ ಅಂತ ಅಂದ್ಕೊಂಡಿದ್ರೋ ಏನೋ?

◆ **ಚಳವಳಿಗಳ ಸಂಪರ್ಕಕ್ಕೆ ನೀವು ಬಾರದೇ ಇದ್ದರೂ, ಮುಂದೆ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಕುರಿತು ಹರಿಕಥೆ ಮಾಡ್ಬೇಕು ಅಂತ ಯಾಕೆ ಅನ್ನಿಸ್ತು?**

ಅದೊಂದು ಕೆಲಸವಾಯಿತು. ನನಗೂ ದಸಂಸ ಜೊತೆ ಸೇರಲಿಲ್ಲವಲ್ಲ ಅಂತ ಕಾಡ್ತಿತ್ತು. ಏನಾದರೂ ಮಾಡಿ ಅಂಬೇಡ್ಕರ್ ತಂದೆ ಕುರಿತು ನಾನು ಏನಾದರೂ ಮಾಡಬೇಕೆಂದು ಹಂಬಲಿಸುತ್ತಿದ್ದೆ. ಅದು 1990ನೇ ಇಸವಿಯ ಅಂಬೇಡ್ಕರ್ ಜಯಂತಿ. ಬಸವಲಿಂಗಪ್ಪನವರು ಆಗ ಪರಿಸರದ ಮಂತ್ರಿ. ಅವರು ಅಷ್ಟೊತ್ತಿಗಾಗಲೇ ಮೆತ್ತಗಾಗಿದ್ದರು. ದೇವರಸಯ್ಯ ಅಂತ ಜಂಟಿ ನಿರ್ದೇಶಕರಿದ್ದರು. ಅವರು ನಾನು ಹರಿಕಥೆ ಮಾಡೋದನ್ನು ನೋಡಿದ್ದರು. ಅವರಿಗೆ ಏನು ಅನ್ನಿಸಿತೋ ಏನೋ, ಅಂಬೇಡ್ಕರ್ ಜಯಂತಿಗೆ ಒಂದು ತಿಂಗಳು ಮುಂಚೆ ನನ್ನನ್ನು ಕರೆದು 'ಬಾಬಾ ಅಂಬೇಡ್ಕರ್ ಅವರದು ಏಪ್ರಿಲ್ 14ರಂದು ಜಯಂತಿ ಇದೆ. ಅಂಬೇಡ್ಕರ್ ಅವರದು ಏನಾದ್ರೂ ಹರಿಕಥೆ ಮಾಡಕ್ಕಾಗುತ್ತಾ ನೋಡಿ' ಅಂದ್ರು. ಭಂಡತನದಿಂದ 'ಮಾಡ್ತೀನಿ,